*Tumbe Group of International Journals*
*Vol. 6, Issue No. 1, pp.32-36, January-April 2023*
**ISSN: 2581-8511**

# Purnachandra Tejeswi's Story 'Abachurina Post Office'

**S. M. Gopi**[1]

[1] Assistant Professor of Kannada
Ramanagara Postgraduate Centre, Bangalore University
email: gopi7519@gmail.com

**Abstract**

Purnachandra Tejaswi is one of the most capable story writers of Kannada literature. his writing is unique and varied. The characters of his story grow in face of contemporary events. Modernity, technology, scientific inventions, shifting effect processes are the material features found in the way of his novels. Interest in horticulture, birds and photography responding to current issues interest in developing Kannada software in computers. Because of all these reasons Tejaswi is a unique novelist of Kannada literature. 'Abachoorina post office' is one of Tejaswi's famous popular stories. Bobanna's role as the central sense of human curiosity is portrayed in a natural drama setting. Bobanna who was working as a poor man, was given a job as a writer in Allijohn Sabra's garden by Machamma, who was working in the plantation of Sahukara Allijohn sab. And gave her daughter Kaveri to Bobanna in marriage and kept her son-in-law in their house. In such a case, after three or four years of marriage, Bobanna was feeling not well. The reason for this is that a post office has been opened in Abachoor recently. Bobanna who had studied up to SSLC, was appointed as the temporary master of this post office. He used to spend morning and evening one hour for post work. The post office was temporarily run at Machamma's

**Key words:** post office, regionalism, temporary, writer.

# ಪೂರ್ಣಚಂದ್ರ ತೇಜಸ್ವಿ ಅವರ ಕಥೆ 'ಅಬಚೂರಿನ ಪೋಸ್ಟಾಫೀಸು'

**ಡಾ. ಎಸ್.ಎಂ.ಗೋಪಿ**

ಕನ್ನಡ ಸಹಾಯಕ ಪ್ರಾಧ್ಯಾಪಕ
ರಾಮನಗರ ಸ್ನಾತಕೋತ್ತರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ
email: gopi7519@gmail.com

## ಪ್ರಸ್ತಾವನೆ

ಕನ್ನಡ ಸಾಹಿತ್ಯದ ಅತ್ಯಂತ ಸಮರ್ಥ ಕಥೆಗಾರರಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಪ್ರಮುಖರು. ಇವರ ಬರವಣಿಗೆ ವಿಶಿಷ್ಟವೂ ವೈವಿಧ್ಯಪೂರ್ಣವೂ ಆಗಿದೆ. ಸಮಕಾಲೀನ

ಸಂಗತಿಗಳಿಗೆ ಮುಖಾಮುಖಿಯಾಗಿ ಇವರ ಕಥೆಯ ಪಾತ್ರಗಳು ಬೆಳೆಯುತ್ತವೆ. ಆಧುನಿಕತೆ, ತಂತ್ರಜ್ಞಾನ, ವಿಜ್ಞಾನದ ಆವಿಷ್ಕಾರಗಳ ಪಲ್ಲಟ, ಪರಿಣಾಮ ಪ್ರಕ್ರಿಯೆಗಳು ಇವರ ಕಥೆ ಕಾದಂಬರಿಗಳ ಧಾರೆಯಲ್ಲಿ ಕಂಡುಬರುವ ವಸ್ತುವಿಶೇಷಗಳು. ತೋಟಗಾರಿಕೆ, ಪಕ್ಷಿಗಳ ಕುರಿತ ಆಸಕ್ತಿ ಹಾಗೂ ಛಾಯಾಗ್ರಹಣ, ವರ್ತಮಾನದ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ, ಕಂಪ್ಯೂಟರ್‌ನಲ್ಲಿ ಕನ್ನಡ ತಂತ್ರಾಂಶಗಳನ್ನು ಅಭಿವೃದ್ಧಿ ಪಡೆಸುವ ಬಗೆಗಿನ ಆಸಕ್ತಿ - ಈ ಎಲ್ಲಾ ಕಾರಣಗಳಿಂದ ತೇಜಸ್ವಿ ಅವರು ಕನ್ನಡ ನಾಡು ಕಂಡ ಸಮರ್ಥ, ವಿಶಿಷ್ಟ ಕಥೆ ಕಾದಂಬರಿಕಾರರಾಗಿದ್ದಾರೆ.

ತೇಜಸ್ವಿ ಅವರ ಪ್ರಸಿದ್ಧ ಜನಪ್ರಿಯ ಕಥೆಗಳಲ್ಲಿ 'ಅಬಚೂರಿನ ಪೋಸ್ಟಾಫೀಸು' ಒಂದು. ಬೋಬಣ್ಣನೆಂಬ ಮುಖ್ಯ ಪಾತ್ರದ ಮುಖೇನ ಒಂದು ಪ್ರಾದೇಶಿಕ ಪರಿಸರದ ಜೀವನ ಚಿತ್ರಣವನ್ನು ಈ ಕಥೆ ಕಟ್ಟಿಕೊಡುತ್ತದೆ. ಮನುಷ್ಯನ ಕುತೂಹಲದ ಕೇಂದ್ರ ಪ್ರಜ್ಞೆಯಾಗಿ ಬೋಬಣ್ಣನ ಪಾತ್ರ ಸಹಜವಾದ ನಾಟಕೀಯ ನೆಲೆಯಲ್ಲಿ ಚಿತ್ರಣಗೊಂಡಿದೆ. ಸಾಹುಕಾರ ಅಲ್ಲಿಜಾನ್ ಸಾಬರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಮಾಚಮ್ಮ, ಪೋಕರಿಯಾಗಿ ಅಲೆಯುತ್ತಿದ್ದ ಬೋಬಣ್ಣನಿಗೆ ಅಲ್ಲಿಜಾನ್ ಸಾಬರ ತೋಟದಲ್ಲಿ ರೈಟರ್ ಕೆಲಸ ಕೊಡಿಸಿದ್ದಲ್ಲದೆ, ತನ್ನ ಮಗಳು ಕಾವೇರಿಯನ್ನು ಬೋಬಣ್ಣನಿಗೆ ಕೊಟ್ಟು ಮದುವೆ ಮಾಡಿ ಅಳಿಯನನ್ನು ತಮ್ಮ ಮನೆಯಲ್ಲಿಯೇ ಉಳಿಸಿಕೊಂಡಿದ್ದಳು. ಹೀಗಿರುವಾಗ ಮದುವೆಯಾಗಿ ಮೂರು ನಾಲ್ಕು ವರ್ಷ ಕಳೆದಂತಹ ಸಂದರ್ಭದಲ್ಲಿ ಬೋಬಣ್ಣ ಅಸಂತುಷ್ಟನೂ ದುಃಖಿಯೂ ಆಗಿದ್ದನು. ಇದಕ್ಕೆ ಕಾರಣ ಅಬಚೂರಿನಲ್ಲಿ ಇತ್ತೀಚೆಗಷ್ಟೇ ಪೋಸ್ಟ್ ಆಫೀಸ್ ಪ್ರಾರಂಭವಾದದ್ದು. ಈ ಪೋಸ್ಟ್ ಆಫೀಸಿನ ಹಂಗಾಮಿ ಮಾಸ್ತರನ್ನಾಗಿ ಎಸ್.ಎಸ್.ಎಲ್.ಸಿ ವರೆಗೂ ಓದಿದ್ದ ಬೋಬಣ್ಣನನ್ನೇ ನೇಮಿಸಲಾಗಿತ್ತು. ಈತ ಬೆಳಿಗ್ಗೆ ಮತ್ತು ಸಾಯಂಕಾಲ ಒಂದು ಗಂಟೆ ಸಮಯವನ್ನು ಪೋಸ್ಟ್ ಕೆಲಸಕ್ಕಾಗಿ ವಿನಿಯೋಗಿಸುತ್ತಿದ್ದನು. ಈ ಪೋಸ್ಟ್ ಆಫೀಸನ್ನು ತಾತ್ಕಾಲಿಕವಾಗಿ ಮಾಚಮ್ಮನ ಮನೆಯಲ್ಲಿ ನಡೆಸಲಾಗುತ್ತಿತ್ತು. ಹೀಗಾಗಿ ಬೋಬಣ್ಣನಿಗೆ ಪೋಸ್ಟ್ ಆಫೀಸಿನ ಜವಾಬ್ದಾರಿ ಬಂದ ಮೇಲೆ ಅದರ ಅವಿಭಾಜ್ಯ ಅಂಗವೇ ಆಗಿ ಹೋಗಿದ್ದನು.

**ಕೀಲಿ ಪದ :** ಪೋಸ್ಟಾಫೀಸು, ಪ್ರಾದೇಶಿಕತೆ, ಹಂಗಾಮಿ, ರೈಟರ್

## ಪೀಠಿಕೆ

ಬೋಬಣ್ಣ ಮೂಲತಃ ಕೆಟ್ಟ ಮನುಷ್ಯನೇನಲ್ಲ ಆದರೂ ಈತ ತಾನು ಮಾಡುತ್ತಿದ್ದ ಪೋಸ್ಟ್ ಆಫೀಸ್ ಕೆಲಸದಲ್ಲಿ ಬೇರೆಯವರಿಗೆ ಬಂದ ಒಂದೆರಡು ಕಾಗದಗಳನ್ನು ಕುತೂಹಲದಿಂದ ತೆರೆದು ನೋಡಿದ ಪ್ರಮಾದದಿಂದ ಅವನ ಮನಸ್ಸು ಚಂಚಲವೂ ಗೊಂದಲವೂ ಆಗಿತ್ತು. ಒಮ್ಮೆ ಯಾರದೋ ಮನಿ ಆರ್ಡರ್ ಒಂದು ರೂಪಾಯಿಯನ್ನು ಸ್ವಂತಕ್ಕೆ ಬಳಸಿಕೊಂಡು ಅವಮಾನಿತನಾಗಿ ಹಣವನ್ನು ಹಿಂದಿರುಗಿಸಿದ್ದನು. ಅಂದಿನಿಂದಲೂ ಹೆಂಡತಿ ಕಾವೇರಿಯು ಸಹ ಗಂಡನನ್ನು ಅನುಮಾನದಿಂದಲೇ ನೋಡುವಂತಾಗಿತ್ತು. ಈ ಘಟನೆಯಿಂದ ಅಷ್ಟೇನೂ ತೊಂದರೆ ಆಗದಿದ್ದರೂ ಅಲ್ಲಿ ಅಲ್ಲಿಜಾನ್ ಸಾಬರ ಮಗ ಅಜೀಜನಿಗೆ ಬಂದಿದ್ದ ಪತ್ರವೊಂದನ್ನು ಅದು ಪ್ರೇಮಪತ್ರವಿರಬಹುದೆಂದು ಕುತೂಹಲದಿಂದ ತೆರೆದು ನೋಡಲು


S.M.Gopi[1]

Tumbe Group of International Journals
Vol. 6, Issue No. 1, pp.32-36, January-April 2023
ISSN: 2581-8511

ಯೋಚಿಸಿದನು. ಇವನಿಗೆ ಕಂಡವರ ಪ್ರೇಮ ಪತ್ರವನ್ನು ಓದುವ ಕುತೂಹಲ ಉಂಟಾಗಲು ಕಾರಣ ತನ್ನ ಹೆಂಡತಿಯೊಂದಿಗಿನ ಯಾಂತ್ರಿಕ ಸಂಸಾರದ ನಿಸ್ಸಾರತೆಯೇ ಕಾರಣವಾಗಿತ್ತೆನ್ನಬಹುದು. ಬೋಬಣ್ಣನಿಗೆ ಇಬ್ಬರು ಮಕ್ಕಳಿದ್ದಾಗಿಯೂ ಕಾಮನೆಯ ಹಸಿವಿನ ಕುತೂಹಲ ತಣಿದಿರಲಿಲ್ಲ. ಹೀಗಾಗಿ ತನ್ನ ಹೆಂಡತಿಯೊಂದಿಗಿನ ಸಲ್ಲಾಪರಹಿತ ಜೀವನದ ಕೊರತೆಯೂ ಅವನನ್ನು ಬೇರೆಯವರ ಪ್ರೇಮ ಪತ್ರವನ್ನು ಓದುವಂತೆ ಪ್ರಚೋದಿಸಿತೆನಬಹುದು. ಹೀಗೆ ಭಾವಿಸಿ ಬೋಬಣ್ಣನು ಆ ಪತ್ರವನ್ನು ತೆರೆದಾಗ ಅದರಲ್ಲಿ ಹೆಣ್ಣಿನ ನಗ್ನಚಿತ್ರವೊಂದು ಇದ್ದದ್ದು ಬೋಬಣ್ಣನನ್ನು ಮತ್ತಷ್ಟು ಕುತೂಹಲ, ಕಾಮನೆಯ ಪ್ರಚೋದನೆಗೆ ತೊಡಗಿಸಿತ್ತು. ಹೀಗಾಗಿ ಬೋಬಣ್ಣನು ಮನಸ್ಸಿನ ಒಳಗೆ ಗುಪ್ತವಾಗಿ ಉದ್ವಿಗ್ನಗೊಳ್ಳತೊಡಗಿದನು. ಇದು ಬೋಬಣ್ಣನ ಮನಃಶಾಂತಿಯನ್ನು ಕೆಡಿಸಿತ್ತು. 'ತಾನು ಹಾಳಾಗಲು ಈ ಪೋಸ್ಟ್ ಆಫೀಸೆ ಕಾರಣವೆಂದು ಹೇಳುತ್ತಾ, ಈ ನಗ್ನ ಚಿತ್ರವು ನನ್ನನ್ನು ಗೊಂದಲಗೊಳಿಸುತ್ತಿದೆ' ಎಂದು ಹರಿದು ಹಾಕಲು ಹವಣಿಸಿ ನಂತರ ನೋಡಿ ಸುಮ್ಮನಾಗುತ್ತಿದ್ದನು. ಹೀಗೆ ಬೋಬಣ್ಣನ ಸಾಂಸಾರಿಕ ಬದುಕು ಮತ್ತು ಪೋಸ್ಟ್ ಆಫೀಸಿನ ಕೆಲಸವು ಗೊಂದಲಮಯವಾಗಿ ನಡೆಯುತ್ತಿತ್ತು.

ಬೋಬಣ್ಣ ಒಮ್ಮೆ ಹೆಂಡತಿ ಕಾವೇರಿಯನ್ನು ಹಿಡಿದುಕೊಂಡು ಮುತ್ತಿಡಲು ಹೋದಾಗ ಆಕೆ ನಾಚಿಕೆ ಮುನಿಸಿನಿಂದ ಕೊಸರಾಡಿ 'ಹೀಗೇಕೆ ಪೀಡಿಸುತ್ತೀರಿ' ಎಂದು ಗುಮಾನಿಸ ತೊಡಗುತ್ತಾಳೆ. 'ಒಟ್ಟಿನಲ್ಲಿ ಗತಕಾಲದ ಪೋಕರಿ ಚಾಳಿಗಳು ಇವನಿಗೆ ಮರುಕಳಿಸುತ್ತಿವೆ' ಎಂದು ಹೆಂಡತಿ ಅನುಮಾನಿಸಿದಳು. ಹೀಗಿರುವಾಗ ಆ ಮನೆಯಲ್ಲಿ ಬೋಬಣ್ಣನ ಹಾಸ್ಯ, ಕುಚೋದ್ಯಗಳನ್ನು ನೋಡಿದ ಅತ್ತೆ ಮಾಚಮ್ಮನಿಗೆ ಅಳಿಯನ ಚರ್ಯೆಗಳು ಅಧಿಕಪ್ರಸಂಗದಂತೆ ಕಂಡು ಬಂದವು. ಜೊತೆಗೆ ಈ ಮನೆಯಲ್ಲಿ ತನ್ನ ಯಜಮಾನಿಕೆಗೆ ಸಂಚಕಾರ ಬರುತ್ತದೆ ಎಂದು ಭಾವಿಸಿ, ಮಗಳನ್ನು ಕರೆದು 'ಗಂಡನಿಗೆ ಚೆಲ್ಲು ಚೆಲ್ಲಾಗಿ ಆಡದಂತೆ' ಬುದ್ಧಿ ಹೇಳೆಂದು ಮಗಳಿಗೆ ಬುದ್ಧಿ ಮಾತು ಹೇಳಿದಳು.

ಹೀಗಿರುವಾಗ ಪೋಸ್ಟ್ ಆಫೀಸ್ನಲ್ಲಿ ಸಾಕಷ್ಟು ಕಾಗದ ಪತ್ರಗಳ ವಹಿವಾಟು ನಡೆಯದಿದ್ದರೆ ಅದನ್ನು ಮುಚ್ಚ ಬೇಕಾಗುತ್ತದೆ ಎಂದು ಬೋಬಣ್ಣನಿಗೆ ಹೆಡ್ ಪೋಸ್ಟ್ ಆಫೀಸಿನಿಂದ ಎಚ್ಚರಿಕೆ ಬರುತ್ತದೆ. ಹೀಗಾಗಿ ಬೋಬಣ್ಣ ಕೆಲಸವನ್ನು ಉಳಿಸಿಕೊಳ್ಳುವ ಸಲುವಾಗಿ ತಾನೇ ಊರುಗಳಿಗೆ ಹೋಗಿ ಪ್ರಚಾರ ಮಾಡಿ, ಅನಕ್ಷರಸ್ಥರ ಪರವಾಗಿ ಕಾಗದ ತಾನೇ ಬರೆದು, ಪೋಸ್ಟ್ ಆಫೀಸಿನ ಕಾರ್ಯ ಚಟುವಟಿಕೆ ಹೆಚ್ಚಿಸುತ್ತಾ ಬಂದರೂ ಅವನ ಮನಃಶಾಂತಿ ಕೆಡುತ್ತಲೇ ಹೋಯಿತು.

ಒಮ್ಮೆ ಬೇಲಾಯದನಿಗೆ ಬಂದ ಪತ್ರವನ್ನು ಬೋಬಣ್ಣ ಕುತೂಹಲದಿಂದ ಓದಿದನು. ಅದರಲ್ಲಿ ಬೇಲಾಯದನ ಮಗಳು ಪದ್ಮ ಹಾದಿತಪ್ಪುತಿದ್ದಾಳೆಂದು, ಬೇಲಾಯದನು ಊರಿಗೆ ಬರದೇ ಬಹಳ ದಿನವಾದುದರಿಂದ, ಮೂಗೂರಿನ ಸಾಹುಕಾರರ ತೋಟದ ಮೇಸ್ತ್ರಿ

ಪದ್ಮಿಯನ್ನು ಒಂದು ತಿಂಗಳು ತನ್ನ ಮನೆಯಲ್ಲಿ ಬಿಡಬೇಕೆಂದು ಪದ್ಮಿಯ ತಾಯಿಗೆ ನೂರು ರೂಪಾಯಿ ಕೊಟ್ಟಿದ್ದನೆಂದು ಬರೆದಿತ್ತು. ಇದನ್ನು ಓದಿದ ಬೋಬಣ್ಣ ನಿರ್ವಿಕಾರ ಚಿತ್ತನಾಗಿ ಅದನ್ನು ದೊಡ್ಡ ಜಾಯಿಕಾಯಿ ಪೆಟ್ಟಿಗೆಗೆ ಹಾಕಿದನು. ಹೀಗಾಗಿ ಈ ಪತ್ರವನ್ನು ಊರಿನ ಸಾರ್ವಜನಿಕರೆಲ್ಲ ಬಂದು ಓದಿ ವಿಷಯವನ್ನು ಪುಕಾರು ಮಾಡಿದರು. ಈ ವಿಚಾರದ ಬಗೆಗೆ ಬೋಬಣ್ಣನ ಮನೆಗೆ ಬಂದ ಇತರರು ಕಾಡು ಹರಟೆ ಹೊಡೆಯುತ್ತಾ ಚರ್ಚೆ ಮಾಡುವುದು ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಪದ್ಮಿ ಮತ್ತು ಅವಳ ತಾಯಿಯ ಬಗೆಗೆ ಲಘುವಾಗಿ ಮಾತನಾಡುತ್ತಿದ್ದ ದಾಸಪ್ಪನೊಂದಿಗೆ ಬೋಬಣ್ಣನು ಹರಟೆ ಹೊಡೆಯುತ್ತಿದ್ದುದು, ಮಾಚಮ್ಮನಿಗೆ ಸಿಟ್ಟು ತರಿಸಿತ್ತು. ಹೀಗಾಗಿ ಮಾಚಮ್ಮ ಮತ್ತು ಕಾವೇರಿ ಬೋಬಣ್ಣನಿಗೆ 'ಈ ರೀತಿ ಕಾಡು ಹರಟೆ ಹೊಡೆಯಬಾರದೆಂದು' ಎಚ್ಚರಿಸಿದರು. ಆಗ ಅವನು 'ಈ ರೀತಿ ವ್ಯವಹಾರ ಮಾಡದಿದ್ದರೆ ಪೋಸ್ಟ್ ಆಫೀಸು ಮುಚ್ಚಬೇಕಾಗುತ್ತದೆ' ಎಂದು ಅತ್ತೆ ಮತ್ತು ಹೆಂಡತಿಯನ್ನು ಸಮಾಧಾನಪಡಿಸಿದನು. ಹೀಗಿದ್ದರೂ ಬೋಬಣ್ಣನು ಹೆಂಡತಿಯ ಸಾಮೀಪ್ಯಕಾಗಿ ಹಂಬಲಿಸುತ್ತಿದ್ದಾಗ ಹೆಂಡತಿ ಅವನಿಂದ ದೂರ ಸರಿಯುತ್ತಾ ಬರುತ್ತಾಳೆ. ಒಮ್ಮೆ ಬೇಲಾಯದನನ ಪತ್ರ ಹರಿದು ಜೀರ್ಣಾವಸ್ಥೆಯಲ್ಲಿದ್ದುದನ್ನು ನೋಡಿ, ಅದೇ ರೀತಿಯ ಪತ್ರವೊಂದನ್ನು ಬೋಬಣ್ಣನು ನಕಲು ಮಾಡಿ ಪೋಸ್ಟ್ ಮಾಡುತ್ತಾನೆ. ಸಂದರ್ಭ ಹೀಗಿರುವಾಗ ಒಮ್ಮೆ ಬೋಬಣ್ಣ ಹೆಂಡತಿಯನ್ನು ತಬ್ಬಿಕೊಳ್ಳಲು ಹೋದಾಗ ಆಕೆ ಕೋಪದಿಂದ ಇವನ ಕೈಯನ್ನು ದೂಡುತ್ತಾಳೆ. ಆಗ ಅವನು ಬಹಳ ದಿನಗಳಿಂದ ತಡೆಹಿಡಿದಿದ್ದ ಕೋಪವನ್ನೆಲ್ಲ ಕಾರುತ್ತಾ 'ಎಲ್ಲ ಹೆಂಗಸರು ಹೀಗೆ ಇರುತ್ತಾರೆಯೇ' ಎಂದು ಪ್ರಶ್ನಿಸಿಕೊಂಡು ಕೋಪದಿಂದ ಅವಳಿಗೆ ಬೈದು ಸುಮ್ಮನಾದ. ಹೀಗಿರುವಾಗ ವರ್ಷದ ಕೊನೆಗೆ ಮಾಚಮ್ಮ ಸಾಹುಕಾರರ ಬಳಿ ಬೋಬಣ್ಣನ ಮದುವೆಗೆ ಮಾಡಿದ ಸಾಲವನ್ನು ಅವನೇ ತೀರಿಸಬೇಕೆಂದು ತೋಟದ ಮಾಲೀಕ ಸಾಹೇಬರಲ್ಲಿ ವಿನಂತಿಸಿಕೊಂಡಳು. ಬೋಬಣ್ಣ ಏನೇನು ವಾದ ಮಾಡಿದರೂ ಕೊನೆಗೆ ಅದನ್ನು ಅವನ ಲೆಕ್ಕಕ್ಕೆ ಹಾಕಲಾಯಿತು. ಆಗ ಬೋಬಣ್ಣ ಕಾವೇರಿ ಮತ್ತು ಅತ್ತೆಯ ನಡುವೆ ಮಾತಿನ ಘರ್ಷಣೆ ನಡೆದು ಕೊನೆಗೆ ಬೋಪಣ್ಣ ತನ್ನ ಕೆಲಸ, ಮಕ್ಕಳನ್ನು ನೆನೆದು ಸುಮ್ಮನಾಗುತ್ತಾನೆ.

ಹೀಗಿರುವಾಗ ಬೇಲಾಯದನನ ಪತ್ರಕ್ಕೆ ಸಂಬಂಧಿಸಿದಂತೆ ಮೂಗೂರಿನ ಮೇಸ್ತ್ರಿ ಬಂದು ಬೋಬಣ್ಣನಿಗೆ 'ನೀನೇ ಪತ್ರವನ್ನು ಬರೆದು ನಮಗೆ ಅವಮಾನ ಮಾಡಿದ್ದಿ' ಎಂದು ಬೈಯುತ್ತಾನೆ. ಸಾಲದಕ್ಕೆ ಬೋಬಣ್ಣನ ಹೆಂಡತಿಯ ಬಗೆಗೆ ಕೊಂಕು ತೆಗೆದು ಮಾತನಾಡುತ್ತಾನೆ. ಆಗ ತನ್ನ ಅತ್ತೆ ಮತ್ತು ಹೆಂಡತಿ ಇಂತಹ ಆಪಾದನೆಯನ್ನು ತನ್ನ ಮೇಲಿನ ಸಿಟ್ಟಿಗೆ ಸಹಿಸಿಕೊಂಡಿರುವುದನ್ನು ನೋಡಿ ಬೋಬಣ್ಣ ಮತ್ತಷ್ಟು ಉಗ್ರನಾಗಿ ಮೂಗೂರಿನ ಮೇಸ್ತ್ರಿಯ ಮುಸುಡಿಗೆ ಬಲವಾಗಿ ಗುದ್ದುತ್ತಾನೆ. ನಂತರ ಅಲ್ಲಿ ಗಲಗುಗದ್ದಲ ವೇರ್ಪಟ್ಟು ಬೋಬಣ್ಣ ಅಲ್ಲಿಂದ ಕಾಲ್ ತೆಗೆಯುತ್ತಾನೆ. ಮಾರನೇ ದಿನ ಪೋಸ್ಟ್ ಆಫೀಸನ್ನು

ಮುಚ್ಚಲಾಗುತ್ತದೆ. ಕಾವೇರಿ ಮತ್ತು ಮಾಚಮ್ಮ ಹಿಂದಿನಂತೆ ತೋಟದ ಕೆಲಸಕ್ಕೆ ಹೋಗತೊಡಗುತ್ತಾರೆ. ಹೀಗೆ ಕತೆಯಲ್ಲಿ ದಾಂಪತ್ಯ ಜೀವನದ ವಿಷಮತೆಯನ್ನು ಹೇಳುತ್ತಲೇ ವ್ಯಾವಹಾರಿಕ ಬದುಕಿನ ವೈಪರೀತ್ಯಗಳನ್ನು ಅಭಿವ್ಯಕ್ತಿಸಲಾಗಿದೆ.

## ಸಮಾರೋಪ

ಬೋಬಣ್ಣ ಮೂಲತಃ ಒಳ್ಳೆಯ ಮನುಷ್ಯನಾಗಿದ್ದರೂ ಅವನು ಒಳಗಿನ ಸುಪ್ತ ಬಯಕೆ, ಅಪರಿಚಿತರ ಪತ್ರಗಳನ್ನು ಓದುವಂತೆ ಪ್ರಚೋದಿಸುತ್ತದೆ. ಈ ಗೀಳು ಮುಂದುವರಿದಂತೆಲ್ಲ ಅವನ ಮನೆಯ ಪರಿಸ್ಥಿತಿಯು ಇದಕ್ಕೆ ವ್ಯತಿರಿಕ್ತವಾದಂತೆ ಅವನು ಇನ್ನಷ್ಟು ಗೊಂದಲಕ್ಕೆ ಈಡಾಗುತ್ತಾನೆ. ಹೀಗಾಗಿ ತನ್ನ ಕುಟುಂಬ ಜೀವನ ಮತ್ತು ವ್ಯಾವಹಾರಿಕ ಬದುಕಿನಲ್ಲಿ ಸಂತೃಪ್ತಿ ಕಾಣದೆ ಮೂಲ ಸ್ಥಿತಿಗೆ ಹಿಂದಿರುಗುತ್ತಾನೆ. ಈ ಕಥೆಯಲ್ಲಿ ಮನುಷ್ಯನಲ್ಲಿರುವ ಅತೃಪ್ತ ಬಯಕೆ ಅಭಿವ್ಯಕ್ತಗೊಳ್ಳದಿದ್ದಾಗ ಆಗುವ ಆತಂಕಗಳ ಬಗೆಗೂ ಬೆಳಕು ಚೆಲ್ಲುತ್ತದೆ.

## ಆಕರ ಗ್ರಂಥಗಳು

[1] ಅಬಚೂರಿನ ಪೋಸ್ಟಾಫೀಸು - ಪೂರ್ಣಚಂದ್ರ ತೇಜಸ್ವಿ
[2] ಕೆ.ಪಿ.ಪೂರ್ಣಚಂದ್ರ ತೇಜಸ್ವಿ - ಕರೀಗೌಡ ಬೀಚನಹಳ್ಳಿ
[3] ಕನ್ನಡ ಸಾಹಿತ್ಯ ಚರಿತ್ರೆ - ತ.ಶು.ಶಾಮರಾಯ
[4] ಕನ್ನಡ ಕಥನ ಸಾಹಿತ್ಯ ಕಾದಂಬರಿ - ಜಿ.ಎಸ್.ಆಮೂರ.